MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 22-1-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇಂಡೋನೇಶಿಯಾದಿಂದ ಪಾಮೆಣ್ಣೆ ರಫ್ತು ನಿಯಂತ್ರಣ

ಇಂಡೋನೇಶಿಯಾ ದೇಶದೊಳಗೆ ಖಾದ್ಯತೈಲ ದರ ಹೆಚ್ಚಳ ತಡೆಯಲು ಇಂಡೋನೇಶೀಯಾ ಅಲ್ಲಿಂದ ಪಾಮೆಣ್ಣೆ ರಫ್ತು ನಿಯಂತ್ರಣ ಹೇರಲು ನಿರ್ಧಾರ ಮಾಡುತ್ತಿದೆಯೆನ್ನಲಾಗಿದೆ. ಇದರಿಂದ ಮಲೇಶ್ಯನ್ ಪಾಮೆಣ್ಣೆ ದರ ಸತತ 2ನೇ ದಿನ ಹೆಚ್ಚಳವಾಯಿತೆನ್ನಲಾಗಿದ್ದು, ಆದರೂ ಈ ತಿಂಗಳಲ್ಲಿ ರಫ್ತು ಇಳಿಕೆಯಾಗುತ್ತಿರುವುದರಿಂದ ದರ ಹೆಚ್ಚಳ ಸೀಮಿತಗೊಂಡಿತೆನ್ನಲಾಗಿದೆ.

## ಡಿಸೆಂಬರ್ ತಿಂಗಳ ಅಮೇರಿಕಾ ಸೋಯಬೀನ್ ಅರೆಯುವಿಕೆ ದಾಖಲೆ ಪ್ರಮಾಣದ ಹೆಚ್ಚಳ

ಯು.ಎಸ್ ನ ಡಿಸೆಂಬರ್ 2021 ರ ಸೋಯಾ ಎಣ್ಣೆ ಅರೆಯುವಿಕೆ ತಿಂಗಳ ದಾಖಲೆ ಪ್ರಮಾಣಕ್ಕೆ ಹೆಚ್ಚಳಗೊಂಡು 186.438 ಮಿಲಿಯನ್ ಬಶೆಲ್, ಹಿಂದಿನ ತಿಂಗಳಿಗಿಂತ 3.9 ಶೇಕಡಾ ಹೆಚ್ಚಳವಾಗಿದೆಯೆಂದು NOPA ಹೇಳಿಕೊಂಡಿದೆ. ಖಾದ್ಯತೈಲ ಹಾಗೂ ಬಯೋಡೀಸೆಲ್ ವಲಯಗಳಿಂದ ಬೇಡಿಕೆಯೂ ಹೆಚ್ಚಳವಾಗಿದೆಯೆನ್ನಲಾಗಿದೆ. ಬ್ರೆಝಿಲ್ ಮತ್ತು ಅರ್ಜೆಂಟಿನಾಗಳಲ್ಲಿ ಕಠಿಣ ಬರ ಪರಿಸ್ಥಿತಿಯಿರುವುದರಿಂದ ಆ ದೇಶಗಳ ಸೋಯಬೀನ್ ಉತ್ಪಾದನೆ ಗಣನೀಯ ಇಳಿಕೆಯಾಗಬಹುದೆನ್ನಲಾಗುತ್ತಿದೆ.

## ಭಾರತದಲ್ಲಿ ರೈಲ್ವೆ ವ್ಯಾಗನ್ ಗಳ ಲಭ್ಯತೆ ಇಳಿಕೆ, ಏಶ್ಯಾ ಅಕ್ಕಿ ದರ ಹೆಚ್ಚಳ

ಬಂದರುಗಳಿಗೆ ಸಾಗಾಟ ಮಾಡಲು ರೈಲ್ವೆ ವ್ಯಾಗನ್ ಗಳ ಲಭ್ಯತೆ ಕಡಿಮೆಯಾದ್ದರಿಂದ ಭಾರತದಲ್ಲಿ ಅಕ್ಕಿ ದರ ಹೆಚ್ಚಳಗೊಂಡಿದೆಯೆನ್ನಲಾಗಿದೆ. ಭಾರತದ ಅಕ್ಕಿ ರಫ್ತು ದರ ಹೆಚ್ಚಳವಾಗಿರುವುದರಿಂದ ಥೈಲಾಂಡ್, ವಿಯೆಟ್ನಾಂ ಮತ್ತಿತರ ದೇಶಗಳ ಅಕ್ಕಿ ರಫ್ತು ದರಗಳೂ ಹೆಚ್ಚಳವಾಗಿವೆಯೆನ್ನಲಾಗಿದೆ. ಹೆಚ್ಚಿನ ಪ್ರಮಾಣದ ರಫ್ತು ಹಾಗೂ ಸರಕಾರದಿಂದ ಹೆಚ್ಚಿನ ಪ್ರಮಾಣದ ಅಕ್ಕಿ ಖರೀದಿಯಿಂದ ಪಶ್ಚಿಮ ಬಂಗಾಲದಲ್ಲಿ ಅಕ್ಕಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಏಶ್ಯಾ ದೇಶಗಳ ಅಕ್ಕಿ ದರ ಹಿಂದಿನ 7 ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳವಾಗಿದೆಯೆನ್ನಲಾಗಿದೆ.